**ಕರ್ನಾಟಕ ಸರ್ಕಾರ**

ಸಂಖ್ಯೆ: DTE-ADMIOEST(7)/ 4/2024 1209

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆರಸ್ತೆ, ಬೆಂಗಳೂರು - 560001,
ದಿನಾಂಕ: 11-01-2024.

**ಕಛೇರಿ ಆದೇಶ**

ವಿಷಯ: ರೂಸಾ 1.0 ಯೋಜನೆಯಡಿ ಆಯ್ಕೆಯಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸರಬರಾಜಾಗಿರುವ ಸಿಸಿಟಿವಿ ಉಪಕರಣಗಳ ವಿಶ್ಲೇಷಣೆ ಪರಿವೀಕ್ಷಣಾ ತಪಾಸಣಾ ಕಾರ್ಯಕ್ಕೆ ಬೋಧಕ ಸಿಬ್ಬಂದಿಗಳನ್ನು ನಿಯೋಜಿಸುವ ಬಗ್ಗೆ.

ಉಲ್ಲೇಖ: ಕಾಲೇಜು ಶಿಕ್ಷಣ ಇಲಾಖೆ ಇವರ ಪತ್ರ ಸಂಖ್ಯೆ: DCE/RUSA/GEN/04/2023, ದಿನಾಂಕ: 28-08-2023

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ರೂಸಾ ಸಂಸ್ಥೆಯ ಮುಖಾಂತರ ರೂಸಾ 1.0 ಯೋಜನೆಯಡಿ ಆಯ್ಕೆಯಾದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಸರಬರಾಜಾಗಿರುವ ಸಿಸಿಟಿವಿ ಉಪಕರಣಗಳನ್ನು ಪರಿಶೀಲಿಸಲು ಪರಿಣಿತರ ತಂಡವನ್ನು ನೇಮಕ ಮಾಡಿ " M/S Universe Telecom Pvt. Limited, No. 1111(18k), 1st Floor, 19th Main, 1st Block, Rajajinagar, Bangalore" ಇಲ್ಲಿಗೆ ಖುದ್ದಾಗಿ ಭೇಟಿ ನೀಡಿ ನಿಯಮಾನುಸಾರ ಪರಿಶೀಲಿಸಿ ನಿಗದಿಪಡಿಸಿರುವ ಪ್ರಮಾಣದಲ್ಲಿ ಸರಬರಾಜಾಗಿರುವ ಕುರಿತು ಹಾಗೂ ಸರಬರಾಜಾದ ಉಪಕರಣಗಳ ವಸ್ತುಗಳ ತಾಂತ್ರಿಕ ವೈಶಿಷ್ಟತೆಗಳನ್ನು ಕಾರ್ಯಾದೇಶದಲ್ಲಿ ನಮೂದಿಸಿದ ಪ್ರಕಾರ (Technical Specification) ಪರಿಶೀಲಿಸುವ ಸಂಬಂಧ ಮೂರನೇ ಪಕ್ಷದಿಂದ ತಪಾಸಣೆ ನಡೆಸಬೇಕಾಗಿದ್ದು, ಸದರಿ ತಪಾಸಣಾ ಕಾರ್ಯಕ್ಕೆ ಬೋಧಕ ಸಿಬ್ಬಂದಿಗಳನ್ನು ನಿಯೋಜಿಸುವಂತೆ ಕೋರಿರುತ್ತಾರೆ.

ಸದರಿ ಸಂಬಂಧ, ತಾಂತ್ರಿಕ ಶಿಕ್ಷಣ ಇಲಾಖೆಯಡಿಯಲ್ಲಿ ಬರುವ ಎಸ್.ಜೆ.ಸರ್ಕಾರಿ ಪಾಲಿಟೆಕ್ನಿಕ್, ಬೆಂಗಳೂರು ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈ ಕೆಳಕಂಡ ಬೋಧಕ ಸಿಬ್ಬಂದಿಗಳನ್ನು ತಪಾಸಣಾ ಕಾರ್ಯಕ್ಕೆ ನಿಯೋಜಿಸಿ ಆದೇಶಿಸಿದೆ.

| ಕ್ರ.ಸಂ | ಬೋಧಕ ಸಿಬ್ಬಂದಿಗಳು ಹೆಸರು ಮತ್ತು ಪದನಾಮ(ಶ್ರೀಯುತರು) | ವಿಭಾಗ |
|---|---|---|
| 01 | ಜಿ ಆನಂದ್, ಆಯ್ಕೆ ಶ್ರೇಣಿ ಉಪನ್ಯಾಸಕರು | ಇ&ಇ |
| 02 | ಶಿವಪ್ರಸಾದ್.ಹೆಚ್.ಎಸ್, ಉಪನ್ಯಾಸಕರು | ಮೆಕ್ಯಾನಿಕಲ್ |
| 03 | ಪ್ರಸನ್ನಕುಮಾರ್, ಉಪನ್ಯಾಸಕರು | ಗಣಕಯಂತ್ರ |
| 04 | ನಾಗೇಂದ್ರ, ಉಪನ್ಯಾಸಕರು | ಇ&ಸಿ |

(...............2)

Scanned with OKEN Scanner

ಸದರಿ ತಪಾಸಣಾ ಕಾರ್ಯಕ್ಕೆ ಪಾಲ್ಗೊಳ್ಳುವ ಬೋಧಕ ಸಿಬ್ಬಂದಿಗಳು ಮೂರನೇ ಪಕ್ಷದ ತಪಾಸಣೆಯನ್ನು ದಿನಾಂಕ: 16-01-2024 ರಿಂದ 18-01-2024ರವರೆಗೆ ನಡೆಸಿ ಮೂರು ದಿನಗಳ ಒಳಗೆ ತಪ್ಪದೆ ಈ ಪತ್ರದೊಂದಿಗೆ ಲಗತ್ತಿಸಿದ ನಮೂನೆ(Format) ಪ್ರಕಾರ ವರದಿಯನ್ನು ಸಲ್ಲಿಸುವಂತೆ ಸೂಚಿಸಲಾಗಿದೆ.

ಸದರಿಯವರು ತಪಾಸಣಾ ಕಾರ್ಯದಲ್ಲಿ ಪಾಲ್ಗೊಳ್ಳಲು ವಾಹನವನ್ನು ಬಾಡಿಗೆಗೆ ಪಡೆದು ಸದರಿ ವಾಹನಕ್ಕೆ ತಗಲುವ ಖರ್ಚು ವೆಚ್ಚದ ಬಿಲ್ಲುಗಳನ್ನು ರೂಸಾ ಸಂಸ್ಥೆಗೆ ನೀಡಿ ಬಿಲ್ಲನ್ನು ಕ್ಲೇಮು ಮಾಡತಕ್ಕದ್ದು. ಮತ್ತು ರೂಸಾ ಸಂಸ್ಥೆಯಿಂದ ನಿಯಮಾನುಸಾರ ಮಂಜೂರಾಗುವ ಮೂರನೇ ಪಕ್ಷದ ತಪಾಸಣೆಯ ಮೊತ್ತವನ್ನು ಸಿಸಿಟಿಕ್ ನಿಯಮಗಳಂತೆ ಸಂಸ್ಥೆಯ ಖಾತೆಗೆ ವರ್ಗಾಯಿಸಲು ಕ್ರಮವಹಿಸುವುದು.

ಜಂಟಿ ನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ

ಪ್ರತಿ:

1. ಸಂಬಂಧ ಪಟ್ಟ ಪ್ರಾಂಶುಪಾಲರುಗಳಿಗೆ (ಸರ್ಕಾರಿ ಪಾಲಿಟೆಕ್ನಿಕ್).
2. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ರಿಜಿಸ್ಟ್ರಾರ್(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಆಯುಕ್ತರ ಆಪ್ತ ಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಜಂಟಿ ನಿರ್ದೇಶಕರ ಆಪ್ತ ಶಾಖೆ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ಇ-ಆಡಳಿತ ವಿಭಾಗಕ್ಕೆ - ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು
7. ಕಛೇರಿ ಕಡತಕ್ಕೆ.

ಇವರಿಗೆ:

M/S Universe Telecom Pvt. Limited, No. 1111(18k), 1st Floor, 19th Main, 1st Block, Rajajinagar, Bangalore.

Scanned with OKEN Scanner